

# ನವಗ್ರಹಗಳ

# ವಿವರಣೆ & ಗ್ರಹಾರಾಧನೆ

# ನವಗ್ರಹಗಳು




## ಗ್ರಹ ಎಂದರೇನು ?

ಗ್ರಹ ಎಂಬುದು ಸಂಸ್ಕೃತದಲ್ಲಿ ಐದಾರು ಅರ್ಥಗಳುಳ್ಳ ಶಬ್ದ. "ಗ್ರಹ ಬಡಿದವನಂತೆ" ಅನ್ನುತ್ತೇವೆ. ಇಲ್ಲಿ ಗ್ರಹ ಎಂದರೆ ಭೂತ, ಪಿಶಾಚಿ ಎಂದರ್ಥ. ಶಕ್ತಿಗ್ರಹ, ಪಾಣಿಗ್ರಹ, ನೀಚಗ್ರಹ ಎಂಬಲ್ಲೆಲ್ಲಾ ಗ್ರಹ ಶಬ್ದವು ಬೇರೆ ಬೇರೆ ಅರ್ಥವನ್ನು ಹೇಳುತ್ತದೆ. "ನನಗೆ ಯಾಕೆ ಬೇಕಿತ್ತು? ನನ್ನ ಗ್ರಹಚಾರ ಮಾರಾಯ" ಎನ್ನುತ್ತಾರೆ ಉಡುಪರು. ಗ್ರಹಗತಿ ಸರಿಯಿತ್ತು, ಅಪಘಾತದಿಂದ ಪಾರಾದೆ.

ಅನ್ನುತ್ತಾರೆ ಕಲ್ಬುರ್ಗಿಯವರು. ಗ್ರಹಾನುಕೂಲಕ್ಕಾಗಿ ಗ್ರಹಯಜ್ಞವನ್ನು ಮಾಡಿ ಎನ್ನುತ್ತಾರೆ ಪುರೋಹಿತರು. ಇಲ್ಲಿ ಗ್ರಹವೆಂದರೆ ಆದಿತ್ಯಾದಿ ನವಗ್ರಹಗಳು.

ಗ್ರಹಣ ಎಂದರೆ ಹಿಡಿಯುವುದು ಎಂದರ್ಥ. ಯಾವುದು ಹಿಡಿಯುವವು? ಅವು ಗ್ರಹಗಳು (ಗೃಹ್ಣಂತಿ ಇತಿ ಗ್ರಹಾಃ) ಸೂರ್ಯಚಂದ್ರರನ್ನು ಹಿಡಿಯುವ ರಾಹು ಕೇತುಗಳಷ್ಟೇ ಗ್ರಹರಲ್ಲ. ಆಯಾಯ ದಶಾಕಾಲದಲ್ಲಿ ನಮ್ಮನ್ನೆಲ್ಲ ಹಿಡಿಯುವ ಆದಿತ್ಯಾದಿಗಳೂ ಗ್ರಹರೇ.

ಈ ಗ್ರಹಗಳು ಸಕಲ ಪ್ರಾಣಿ ಜಾತದ ಜೀವನದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತಿದ್ದು ತಮ್ಮ ಪ್ರಭಾವವನ್ನು ಬೀರುತ್ತವೆ. ಪರಮೋತ್ಕರ್ಷವನ್ನು ಹೊಂದಿ

ಗದ್ದುಗೆಯನ್ನು ಏರುವುದಕ್ಕೂ,ನೆಲಕಚ್ಚಿ ಪ್ರಪಾತಕ್ಕೆ ಬೀಳುವುದಕ್ಕೂ ಗ್ರಹದ ಸ್ಥಿತಿಗತಿಗಳು ಕಾರಣವಾಗುತ್ತವೆ. ಕಾರಿಕೆಯೊಂದು ಹೀಗೆ ಹೇಳುತ್ತದೆ.

ಗ್ರಹಾ ಗಾವೋ ನರೇಂದ್ರಶ್ಚ ಬ್ರಾಹ್ಮಣಶ್ಚ ವಿಶೇಷತಃ ।

ಪೂಜಿತಾಃಪೂಜಯಿಷ್ಯಂತಿ ನಿರ್ದಹಂತ್ಯನಮಾನಿತಾ ॥

ಗ್ರಹಗಳು ಗೋವುಗಳು ರಾಜ ಮತ್ತು ಬ್ರಾಹ್ಮಣರು ಈ ನಾಲ್ವರು ಪೂಜಿತರಾದರೆ ಸದಭೀಷ್ಟ ಪ್ರದರು, ಅವಮಾನಿತವಾದರೆ ಸರ್ವನಾಶಕರು ಎಂದೂ ಜ್ಯೋತಿಶ್ಶಾಸ್ತ್ರ

## ಒಂಬತ್ತು ಗ್ರಹಗಳನ್ನು ಹೆಸರಿಸುತ್ತದೆ :

- ಸೂರ್ಯ
- ಚಂದ್ರ
- ಕುಜ
- ಬುಧ
- ಗುರು
- ಶುಕ್ರ
- ಶನಿ
- ರಾಹು
- ಕೇತು

ಮೊಟ್ಟಮೊದಲು ಈ ಗ್ರಹಗಳ ಸ್ವರೂಪವನ್ನು ಪರಿಚಯಿಸಿಕೊಳ್ಳೋಣ.



# ಸೂರ್ಯ

"ಗ್ರಹಾಣಾಮಾದಿರಾದಿತ್ಯಃ" ಎಂಬಂತೆ ಈತ ಗ್ರಹಗಳಲ್ಲಿ ಮೊದಲಿಗೆ. ಆರೋಗ್ಯ ಜ್ಞಾನಗಳನ್ನು ದಯಪಾಲಿಸುವ ದೇವತೆ. ೨ ಕೈಯಲ್ಲಿ ಕೆಂಪು ಕಮಲಗಳು ಕೆಂಪು ರಥದಲ್ಲಿ ರಥಿಕ, ಅರುಣನೇ ಇವಗೆ ಸಾರಥಿ. ರಥಕ್ಕೆ ಕಟ್ಟಿರುವ ಕುದುರೆಗಳು ೭.

ಸೂಕ್ಷ್ಮಗುಂಗುರು ಕೂದಲುಗಳಿಂದ ಒಪ್ಪುವ ತಲೆ. ಆಕರ್ಷಕ ರೂಪ ಚೇತೋಹಾರಿಯಾದ ಗಂಭೀರ ಧ್ವನಿ. ಹೆಚ್ಚು ಎತ್ತರವಿಲ್ಲದ ನಿಲುವು. ಅನುಪಮ ಬುದ್ಧಿ ಚಾತುರ್ಯ. ಗೋರೋಚನದಂತೆ ಕೆಂಪು ಬೆರೆತ ಸುಂದರ ಕಣ್ಣುಳು. ಧೈರ್ಯಶಾಲಿ ಪ್ರಚಂಡ. ಪಿತ್ತಪ್ರಕೃತಿ, ಉನ್ನತ ವ್ಯಕ್ತಿತ್ವ. ದೊಡ್ಡ ಕೈಗಳು. ಕೆಂಪುಉಡುಗೆ, ಇದು ರವಿಯನ್ನು ಶಾಸ್ತ್ರಕಾರರು ಗುರುತಿಸುವ ಬಗೆ.

ಆದಿತ್ಯ ಮಾರ್ತಾಂಡ ಭಾನು,ರವಿ,ದಿವಾಕರ,ಪ್ರಭಾಕರ ಇವು ಸೂರ್ಯನ ಪ್ರಸಿದ್ಧ ಹೆಸರುಗಳು. ಅದಿತಿ-ಕಶ್ಯಪರ ಮಗ. ಅದೊಂದು ದಿನ ಕಶ್ಯಪರು ಮನೆಯಲ್ಲಿ ಇರಲಿಲ್ಲ. ಅದಿತಿದೇವಿ ತುಂಬು ಗರ್ಭಿಣಿ. ದೇವರ ಧ್ಯಾನದಲ್ಲಿದ್ದಾಳೆ. ಹೊರಗಿನಿಂದ ಭವತಿ ಭಿಕ್ಷಾಂಧೇಹಿ ಎಂಬ ಮಾಣವಕನ ಧ್ವನಿ. ಬುಧನು ಭಿಕ್ಷೆಗಾಗಿ ಬಂದಿದ್ದ. ಕರೆದ ಕೂಡಲೇ ಭಿಕ್ಷೆಗೆ ಬರಲಿಲ್ಲವೆಂಬ ಸಿಟ್ಟು ಬುಧನಿಗೆ. ಏನು ಗರ್ಭಿಣಿ ಎಂಬ ಅಹಂಕಾರವೋ? ಗರ್ಭದಲ್ಲಿರುವ ಆ ಶಿಶು ಸತ್ತು ಹೋಗಲಿ ಎಂಬ ಶಾಪವಾಗಿ ಆ ಸಿಟ್ಟು ಸ್ಪೋಟಗೊಂಡಿತು. ಆಕೆ ತತ್ತರಿಸಿ ಬಿದ್ದಳು. ಮೃತವಾದ ಅಂಡದಮ್ತೆ ಕಾಣಿಸಿದ ಆ ಶಿಶು ಶ್ರೀಹರಿಯ ಮಹಿಮೆಯಿಂದ ಕಶ್ಯಪರ ಪ್ರಭಾವದಿಂದ ಸತ್ತು ಬದುಕಿತು. ಈ ಮಗುವೇ ಸೂರ್ಯ. ಆದ್ದರಿಂದಲೇ ಮಾರ್ತಾಂಡ ಆದಿತ್ಯ ಎಂಬುದು ಇವನ ಇನ್ನೊಂದು ಹೆಸರು. ಅದಿತಿಯ ಮಗನೆಂಬ ಕಾರಣದಿಂದ ಮಾತ್ರ ಇವನಿಗೆ ಈ ಹೆಸರಲ್ಲ. ದಿನದಿನವೂ ಉದಯಿಸುತ್ತಾ ಅಸ್ತಮಿಸುತ್ತಾ ಜೀವಜಾತದ ೨೪ ಘಂಟೆಗಳ ಆಯುಷ್ಯವನ್ನು ಕಿತ್ತು ಸಾಗುವುದರಿಂದ ಇವನಿಗೆ ಈ ಹೆಸರು. (ಆಯುರಾದಾಯ ಯಾತೀತಿ ಆದಿತ್ಯಃ)

ಮನುಷ್ಯ ಪ್ರತಿದಿನವೂ ಸೂರ್ಯಾಸ್ತದ ಸುಂದರ ಸಂಜೆಯನ್ನು ನೋಡಿ ಖುಶಿ ಪಡುತ್ತಾನೆ. ತನ್ನ ವಯಸ್ಸು ಒಂದು ದಿನ ಜಾಸ್ತಿಯಾಯಿತು ಎಂದೇ ಭಾವಿಸುತ್ತಾನೆ. ಆಯುಷ್ಯದಲ್ಲಿ ಒಂದುದಿನ ಕಡಿಮೆಯಾಯಿತು ಎಂದು ಯೋಚಿಸುವುದಿಲ್ಲ. ಇದು ದುರಂತ.

ಸಂಜ್ಞಾ ಮತ್ತು ಛಾಯಾ ಸೂರ್ಯನ ಹೆಂಡಂದಿರು. ಸಂಜ್ಞೆಯಲ್ಲಿ ಯಮ ಯಮುನೆ ಮತ್ತು ಮನು ಹುಟ್ಟಿದರು. ಛಾಯಾ ದೇವಿಯಲ್ಲಿ ಸಾವರ್ಣಿ ಮತ್ತು ಶನೀಶ್ವರ ಎಂಬ ಈರ್ವರು ಹುಟ್ಟಿದರು. ಈ ಮನ್ವಂತರದ ಅಧಿಪತಿಯಾದ ವೈವಸ್ವತ ಮನು ಸೂರ್ಯನ ಪುತ್ರ. ಗ್ರಹಕೋಟಿಯಲ್ಲಿ ಭಯಂಕರನೆನಿಸಿದ ಶನಿಯೂ ರವಿಕುಮಾರ. ಕರ್ಣ ಸುಗ್ರೀವರು ಸೂರ್ಯಾಂಶ ಸಂಭೂತರು.

ಈ ಗ್ರಹವನ್ನು ಸ್ತುತಿಸುವ ಸ್ತೋತ್ರ ಹೀಗಿದೆ. ಈ ಶ್ಲೋಕವನ್ನು ಹತ್ತುಬಾರಿಯೋ ನೂರು ಬಾರಿಯೋ ಪಠಿಸುವುದರ ಮೂಲಕ ಗ್ರಹದೋಷವನ್ನು ರಿಹರಿಸಿಕೊಳ್ಳಬಹುದು.

**ಜಪಾಕುಸುಮಸಂಕಾಶಂ ಕಾಶ್ಯಪೇಯಂ ಮಹಾದ್ಯುತಿಮ್ ।**

**ಧ್ವಾಂತಾರಿಂ ಸರ್ವಪಾಪಘ್ನಂ ಪ್ರಣತೋಸ್ಮಿ ದಿವಾಕರಮ್ ॥**

"ಕೆಂಪುದಾಸವಾಳ ಪುಷ್ಪದ ಕಾಂತಿ, ಕಶ್ಯಪನ ಮಗ, ಮಹಾತೇಜಸ್ವಿ, ಕತ್ತಲ ಕಡುವೈರಿ, ಸರ್ವಪಾಪ ನಾಶಕ, ಇಂತಹಾ ದಿವಾಕರನನ್ನು ನಮಿಪೆ".

---



## ಚಂದ್ರ

ಚಂದ್ರ, ಶಶಿ, ಇಂದು, ಸೋಮ, ಶೀತಗು, ವಿಧು, ಇವು ಚಂದ್ರನ ಪ್ರಸಿದ್ಧ ಹೆಸರುಗಳು. ರಾಜಾನೌ ರವಿಶೀತಗು ಎಂಬಂತೆ ಸೂರ್ಯಚಂದ್ರರು ಗ್ರಹರಾಜರು. ಸೂರ್ಯ ಬೆಳಕು ಕೊಡುವ ದೇವನಾದರೆ, ತಾಪದಿಂದ ಬೆಂದವನಿಗೆ ತಂಪು ಕೊಡುವ ದೇವತೆ ಚಂದ್ರ. ಎರಡು ಕೈಗಳು. ಒಂದರಲ್ಲಿ ಗದೆ, ಇನ್ನೊಂದರಲ್ಲಿ ಅಭಯಮುದ್ರೆ. ಬಿಳಿಯ ಸ್ವಚ್ಛವಾದ ಬಟ್ಟೆಯನ್ನು ಧರಿಸಿದ ಸುಂದರವಾದ ಹತ್ತು ಕುದುರೆಗಳ ಬಿಳಿಯ ರಥದಲ್ಲಿ ಆಸೀನ.

ಸೌಮ್ಯ ಸ್ವಭಾವ, ಸುಂದರವಾದ ಕಣ್ಣುಳು, ಮಧುರ ಮಾತು, ಬಿಳಿಬಣ್ಣ, ಬೊಜ್ಜು ಇಲ್ಲದ ಶರೀರ, ಮಧ್ಯವಯಸ್ಕ, ಎತ್ತರದ ನಿಲುವು. ಕಪ್ಪು ಗುಂಗುರು ಕೂದಲು, ಬುದ್ಧಿವಂತಿಕೆ, ಸಾತ್ವಿಕತೆ, ಬಹುಜನ ಮೈತ್ರಿ, ದಯಾಳುತ್ವ,

ವೃದ್ಧಸ್ತ್ರೀ ಸಂಪರ್ಕ, ಚಾಂಚಲ್ಯ ಸೌಭಾಗ್ಯ, ಬಿಳಿಯ ಉಡುಗೆ ವು ಚಂದ್ರನ ಲಕ್ಷಣಗಳು.

ಚಂದ್ರ ಸಮುದ್ರ ಮಥನದ ಕಾಲದಲ್ಲಿ ಕ್ಷೀರೋದಾರ್ಣವ ಸಂಭೂತನೂ ಹೌದು. ಅತ್ರಿನೇತ್ರ ಸಮುದ್ಭವನೂ ಹೌದು. ಸ್ವಾಯಂಭುವ ಮನ್ವಂತರದಲ್ಲಿ ಅತ್ರಿಋಷಿಯ ಕಣ್ಣಿನಿಂದ ಜನಿಸಿದ. ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದಲ್ಲಿ ಧರ್ಮಪ್ರಜಾಪತಿಗೆ ವಸುಪ್ನಿಯಲ್ಲಿ ಹುಟ್ಟಿದ.

ದಕ್ಷಪ್ರಜಾಪತಿಯು ತನ್ನ ಅರವತ್ತು ಹೆಣ್ಣುಮಕ್ಕಳಲ್ಲಿ ಇಪ್ಪತ್ತೇಳು ಮಕ್ಕಳನ್ನು ಚಂದ್ರನಿಗೆ ಕೊಟ್ಟನು. ಈ ಚಂದ್ರಪತ್ನಿಯರೇ ಇಪ್ಪತ್ತೇಳು ನಕ್ಷತ್ರಗಳು. ಚಂದ್ರನು ರೋಹಿಣೀ ಎಂಬವಳಲ್ಲಿ ಮಾತ್ರ ಅತಿಶಯವಾಗಿ ಅನುರಕ್ತನಾದಾಗ ಉಳಿದವರು ಅಪ್ಪನಲ್ಲಿ ದೂರಿದರು. ಅಪ್ಪ ಅಳಿಯನಿಗೆ ಕ್ಷಯರೋಗ ಬರುವಂತೆ ಶಪಿಸಿದ.

ಚಂದ್ರ ವಿದ್ಯಾಭ್ಯಾಸಕ್ಕಾಗಿ ದೇವಗುರುವಾದ ಬೃಹಸ್ಪತಿಯಲ್ಲಿ ಹೋಗಿದ್ದ. ಸುಂದರಾಂಗನಾದ ಇವನನ್ನು ಗುರುಪತ್ನಿ ತಾರೆ ಮೋಹಿಸಿದಳು. ಆಕೆಯನ್ನು ಚಂದ್ರ ಬಲಾತ್ಕಾರದಿಂದ ಅಪಹರಿಸಿ ಬುಧನನ್ನು ಪಡೆದ.

ಮತ್ತೊಮ್ಮೆ ಸಮುದ್ರಮಥನ ಕಾಲದಲ್ಲಿ ಸಾಗರದಿಂದ ಆವಿರ್ಭವಿಸಿದ ಚಂದ್ರನನ್ನು ಶಿವ ತಲೆಯಲ್ಲಿ ಧರಿಸಿ ಚಂದ್ರಶೇಖರನೆನಿಸಿದ.

ಅಮೃತಪಾನದ ಸಂದರ್ಭದಲ್ಲಿ ಈತ ಸೂರ್ಯನೊಂದಿಗೆ ಸೇರಿಕೊಂಡು ಮಾಯಾವಿಯಾದ ರಾಹುವನ್ನು ವಿಷ್ಣುವಿಗೆ ಸೂಚಿಸಿದ. ವಿಷ್ಣು ಚಕ್ರಾಯುಧದಿಂದ ರಾಹುವಿನ ಶಿರವನ್ನು ಭೇದಿಸಿದರೂ ಅಮೃತದ ಪ್ರಭಾವದಿಂದ ರುಂಡವು ರಾಹುಗ್ರಹವೆನಿಸಿ ಚಂದ್ರಸೂರ್ಯರನ್ನು ದ್ವೇಶಿಸತೊಡಗಿತು.

ಈ ಗ್ರಹವನ್ನು ಸ್ತುತಿಸುವ ಸ್ತೋತ್ರ ಹೀಗಿದೆ. ಈ ಶ್ಲೋಕವನ್ನು ಹತ್ತುಬಾರಿಯೋ ನೂರು ಬಾರಿಯೋ ಪಠಿಸುವುದರ ಮೂಲಕ ಗ್ರಹದೋಷವನ್ನು ಪರಿಹರಿಸಿಕೊಳ್ಳಬಹುದು.

**ದಧಿಶಂಖತುಷಾರಾಭಂ ಕ್ಷೀರೋದಾರ್ಣವ ಸಂಭವಮ್ ।**

**ನಮಾಮಿ ಶಶಿನಂ ಭಕ್ತ್ಯಾ ಶಂಭೋರ್ಮುಕುಟಭೂಷಣಮ್ ॥**

ಮೊಸರು,ಶಂಖ, ಹಿಮಗಳಂತೆ ಶ್ವೇತಕಾಂತಿ, ಕ್ಷೀರಸಾಗರದಲ್ಲಿ ಉತ್ಪತ್ತಿ, ಶಿವನ ತಲೆಯ

ಅಲಂಕಾರ. ಅಂತಹ ಶಶಾಂಕನಿಗೆ
ಭಕ್ತಿಯಿಂದ ಬಾಗುವೆ.



# ಅಂಗಾರಕ

ಮಂಗಲ ಅಂಗಾರಕನು ಕುಜ,ಭೌಮ ಎಂಬವು ಇವನ ಪ್ರಸಿದ್ದ ಹೆಸರುಗಳು. ಕೆಂಪುಮಾಲೆಯನ್ನು ಧರಿಸಿರುವ ಕೆಂಪು ಬಟ್ಟೆಯ ಚತುರ್ಭುಜ ಈತ. ಗದಾಶಕ್ತಿ ಖಡ್ಗಶೂಲಗಳನ್ನು ಚತುರ್ಭುಜಗಳಲ್ಲಿ ಧರಿಸಿದ್ದಾನೆ.

ಕುಳ್ಳಶರೀರ, ಪಿಂಗಳ ಕಣ್ಣಳು ಮಸ್ತಾದ ಮೈಕಟ್ಟು, ಕಾಂತಿಯುಕ್ತ ಮುಖ, ಚಂಚಲ ಸ್ವಭಾವ, ಚುರುಕುತನ, ಶೌರ್ಯ, ಪ್ರತಿಭಾಪೂರ್ಣ ಮಾತುಗಳು,
ಗುಂಗುರು ಗುಂಗುರಾದ ಕೆಂಪು ಹರಳು, ತಾಮಸ ಸ್ವಭಾವ, ಸಾಹಸ ಪ್ರಿಯತೆ, ಹಿಂಸಾ ತತ್ಪರತೆ,ಕೆಂಪಾದ ಮೈಬಣ್ಣ, ಕೆಂಪು ಉಡುಗೆಗಳು ಇದು ಕುಜನ ಸ್ವರೂಪದ ಚಿತ್ರ.

ವಿಷ್ಣುವಿನ ಅನುಗ್ರಹದಿಂದ ಭೂದೇವಿಯಲ್ಲಿ ಹುಟ್ಟಿದ ಭೂಮಿಯ ಮಗನಾದ್ದರಿಂದಲೇ ಈತ ಭೌಮ. ಆದ್ದರಿಂದಲೇ ಕುಜ. ತಪಸ್ಸಿನಿಂದ ನವಗ್ರಹಗಳಲ್ಲಿ ಒಬ್ಬನಾದ ದಾಕ್ಷಾಯಿಣೀ ವಿರಹ ಪೀಡಿತನಾದ. ಶಿವನ ಮುಖದ ಬೆವರು ಭೂಮಿಯಲ್ಲಿ ಬಿದ್ದಾಗ ಅದರಿಂದ ಹುಟ್ಟಿದವನು ಕುಜನೆನ್ನುತ್ತದೆ ಬ್ರಹ್ಮವೈವರ್ತ ಪುರಣ.

ಈತ ಅಮಂಗಲ ಫಲಗಳನ್ನು ಸೂಚಿಸುವುದೇ ಹೆಚ್ಚು. ಆದರೂ ಇವನ ಹೆಸರು ಮಂಗಲ. ಇವನ ವಾರ ಮಂಗಲವಾರ. ಈ ದಿನ ಎಲ್ಲಾ ಶುಭಕೆಲಸಗಳಿಗೂ

ಅಯೋಗ್ಯವಾಗಿ ಅಮಂಗಲವಾರವೆನಿಸಿದೆ. ಹೆಚ್ಚೇಕೆ ಕ್ಷೌರಕ್ಕೂ ನಿಷಿದ್ಧವಾದ ದಿನವೆನಿಸಿದೆ. ಹೀಗಿದ್ದರೂ ಈ ಕುಜನಿಗೆ ಮಂಗಲನೆಂಬ ಹೆಸರೇಕೆ? ಕ್ಷೀರಸಾಗರ ಭಟ್ಟರ ಮನೆಯಲ್ಲಿ ಕಾಸಿನ ಮಜ್ಜಿಗೆ ಇಲ್ಲವೆಂಬ ಗಾದೆಯ ಮಾತಿನಂತಾಯಿತಲ್ಲ ?

ನಿಜ,ಮಂಗಲನೆಂದು ಹೇಳಿಯಾದರೂ ಆತ ಮಂಗಲಕರನಾಗಲಿ ಎನ್ನುವ ಪ್ರಾಚೀನ ಭಾವನೆಯೇ ಇದಕ್ಕೆ ಕಾರಣ. ಅರವತ್ತನೆಯ ಸಂವತ್ಸರ ಕ್ಷಯ. ಆದರೆ ಹಾಗೆನ್ನುತ್ತೇವೆಯೇ? ಅಕ್ಷಯನಾಮ ಸಂವತ್ಸರೇ ಎನ್ನುತೇವೆ. ಮನುಷ್ಯನಿಗೆ ಕೆಟ್ಟ ಶಬ್ದ ಹೇಳಲೂ ಹೆದರಿಕೆ!

ಈ ಗ್ರಹವನ್ನು ಸ್ತುತಿಸುವ ಸ್ತೋತ್ರ ಹೀಗಿದೆ. ಈ ಶ್ಲೋಕವನ್ನು ಹತ್ತುಬಾರಿಯೋ ನೂರು ಬಾರಿಯೋ ಪಠಿಸುವುದರ ಮೂಲಕ ಗ್ರಹದೋಷವನ್ನುಪರಿಹರಿಸಿಕೊಳ್ಳಬಹುದು.

**ಧರಣೀ ಗರ್ಭಸಂಭೂತಂ ವಿದ್ಯುತ್ಕಾಂಚನಸನ್ನಿಭಮ್ ।**

**ಕುಮಾರಂ ಶಕ್ತಿಹಸ್ತಂ ಚ ಮಂಗಲಂ ಪ್ರಣಮಾಮ್ಯಹಮ್ ॥**

ಭೂದೇವಿಯ ಗರ್ಭದಲ್ಲಿ ಜನಿಸಿದ, ಮಿಂಚಿನ ಮತ್ತು ಚಿನ್ನದ ಕಾಂತಿಯಂತೆ ಪಾಟಲಕಾಂತಿಯುಳ್ಳ ಹದಿನಾರು ವರುಷದ ಕುಮಾರನಾದ ಶಕ್ತ್ಯಾಯುಧಧರಿಯಾದ ಮಂಗಲನಿಗೆ ನನ್ನ ನಮನ.

---



## ಬುಧ

ಚಂದ್ರ (ಸೋಮ)ನ ಮಗನಾದ್ದರಿಂದ ಸೌಮ್ಯನೆಂದು ಪ್ರಸಿದ್ಧನಾಗಿದ್ದಾನೆ. ಹಸಿರು ಬಟ್ಟೆಯನ್ನುಟ್ಟ ಚತುರ್ಭುಜನು, ಖಡ್ಗ ಗುರಾಣಿ ಗದೆಗಳನ್ನು ವರಮುದ್ರೆಯನ್ನೂ ಧರಿಸಿರುವ ಸಿಂಹವಾಹನ.

ಕೆಂಪಾದ ವಿಶಾಲ ಕಣ್ಣುಗಳು,ಸ್ವಚ್ಛವಾದ ಒಳ್ಳೆಯ ಮಾತುಗಳು, ಗರಿಕೆಯ ದಲದಂತೆ ಹಸಿರು ಮೈಬಣ್ಣ, ರಾಜಸ್ ಸ್ವಭಾವ, ಸದಾ ಸಂತೋಷ, ಮಧ್ಯಮರೂಪ, ನಿಪುಣ, ಉಡುಗೆ ನಡಿಗೆಗಳಿಂದ ಎಲ್ಲರನ್ನೂ ಅನುಕರಿಸುವ ಸ್ವಭಾವ, ಪಾಲಾಶದಂತೆ ಹಸಿರು ಬಣ್ಣದ ಉಡುಗೆಗಳು. ಇವು ಇವನಲ್ಲಿ ಕಾಣುವ ಲಕ್ಷಣಗಳು.

ದೇವಗುರು ಬೃಹಸ್ಪತಿಯ ಭಾರ್ಯೆ ತಾರೆ. ಮುಗ್ಧ ಸ್ವಭಾವದ ಅಬಲೆ, ಸುಂದರಾಂಗಳಾದ ಚಂದ್ರ ಆಕೆಯನ್ನು ಬಲಾತ್ಕಾರದಿಂದ ಅಪಹರಿಸಿ ಪರಿಗ್ರಹಿಸಿದ.ಬ್ರಹ್ಮನ ಆದೇಶದ ಮೇರೆಗೆ ಚಂದ್ರ ತಾರೆಯನ್ನು ಬಿಟ್ಟುಕೊಟ್ಟ. ಗರ್ಭಿಣಿಯಾಗಿದ್ದ ಆಕೆಗೆ ಬೃಹಸ್ಪತಿ ಹೇಳಿದ “ಬೇರೆಯವರಿಂದ ಧರಿಸಿದ ಗರ್ಭವನ್ನು ತ್ಯಜಿಸು, ಇಲ್ಲವಾದರೆ ಸುಟ್ಟುಬಿಡುತ್ತೇನೆ.” ತಾರೆ ನಾಚಿಕೆಯಿಂದ ಗರ್ಭವನ್ನು ತ್ಯಜಿಸಿದಳು. ಬಂಗಾರದ ಬಣ್ಣದ ಸುಂದರ ಮಗು ಜನಿಸಿತು. ಒಡನೆಯೇ ಬೃಹಸ್ಪತಿಯ

ಮನಸ್ಸು ಬದಲಾಯಿತು. ಇದು ನನ್ನ ಮಗು ಎಂದ ಬೃಹಸ್ಪತಿ. “ಅಲ್ಲ ನನ್ನದು ಎಂದ ಚಂದ್ರ.

ವಿವಾದ ಮುಗಿಲು ಮುಟ್ಟಿತ್ತು. ಋಷಿಮುನಿಗಳು ತರೆಯಲ್ಲಿ ಕೇಳಿದರು. “ಸತ್ಯಹೇಳು” ಎಂದು.ನಾಚಿಕೆಯಿಂದ ತಲೆತಗ್ಗಿಸಿದ ಆಕೆ ಬಾಯಿ ಬಿಡಲಿಲ್ಲ. ಆಗ ತಾನೇ ಹುಟ್ಟಿದ ಮಗು ಆರ್ಭಟಿಸಿತು. “ಛೀ ದುರಾಚಾರೇ! ತೆರೆಯ ಹಿಂದೆ ಮಾಡಿದ ಆತ್ಮಘಾತುಕತನವನ್ನು ಮರೆಮಾಚುವೆಯೇಕೆ?ನಾಚಿಕೆಯಾಗುವುದಿಲ್ಲವೇ! ಬಿಚ್ಚುಬಾಯಿ.” ಈತ ಚಂದ್ರನ ಮಗನೆಂದು ಸಾಬೀತಾಯಿತು. ಈ ಮಗುವನ್ನು ಚಂದ್ರನಿಗೆ ಒಪ್ಪಿಸಲಾಯಿತು.ಹುಟ್ಟಿನಿಂದಲೇಅಸಾಧಾರಣ ಬೌದ್ಧಿಕತೆಯನ್ನು ತೋರಿದ ಈ ಅಸಾಧಾರಣ ಜ್ಞಾನಿಗೆ “ಬುಧ”ನೆಂದು ಚತುರ್ಮುಖನೇ ಇಟ್ಟ ಹೆಸರು.

ಈ ಬುಧನಿಗೆ ಇಳೆಯೆಂಬವಳಲ್ಲಿ ಪುರೂರವನೆಂಬ ಮಗ ಜನಿಸಿದ.

ಈ ಗ್ರಹವನ್ನು ಸ್ತುತಿಸುವ ಸ್ತೋತ್ರ ಹೀಗಿದೆ. ಈ ಶ್ಲೋಕವನ್ನು ಹತ್ತುಬಾರಿಯೋ ನೂರು ಬಾರಿಯೋ ಪಠಿಸುವುದರ ಮೂಲಕ ಗ್ರಹದೋಷವನ್ನು ಪರಿಹರಿಸಿಕೊಳ್ಳಬಹುದು.

**ಪ್ರಿಯಂಗು ಕಲಿಕಾಭಾಸಂ ರೂಪೇಣಾಪ್ರತಿಮಂ ಬುಧಮ್।**

**ಸೌಮ್ಯಂ ಸೌಮ್ಯಗುಣೋಪೇತಂ ನಮಾಮಿ ಶಶಿನಂದನಮ್ ॥**

ನವಣೆಯ ತೆನೆಯಂತೆ ಹಸಿರುಕಾಂತಿಯುಳ್ಳವ. ರೂಪದಲ್ಲಿ ಸಾಟಿಯಿಲ್ಲ, ಸೋಮನ (ಚಂದ್ರನ) ಮಗ. ಸೌಮ್ಯಸ್ವಭಾವ. ಅಪ್ಪನಾದ ಚಂದ್ರನ ಗುಣಗಳುಳ್ಳವ. ಚಂದ್ರನಿಗೆ ಮಿತ್ರಗ್ರಹವೆನಿಸಿ ಆನಂದಪ್ರದನಾದ ಬುಧನಿಗೆ ನನ್ನ ಪ್ರಣಾಮಗಳು.



## ಗುರು

ದೇವತೆಗಳಿಗೆ ಗುರುವಾದ್ದರಿಂದ ಬೃಹಸ್ಪತಿಗೆ ಗುರುವೆಂದು ಹೆಸರು. ಉಳಿದ ಗ್ರಹಗಳಿಗಿಂತ ದೊಡ್ಡ ಗಾತ್ರದ ಗ್ರಹವಾದ್ದರಿಂದಲೂ ಗುರು. ಹಳದಿ ಬಟ್ಟೆಯನ್ನುಟ್ಟ ಈ ಬಂಗಾರದ ಬಣ್ಣದ ಚತುರ್ಭುಜ, ಕೈಗಳಲ್ಲಿ ದಂಡ, ವರಮುದ್ರೆ, ಜಪಮಾಲೆ, ಕಮಂಡಲುಗಳನ್ನು ಧರಿಸಿದ್ದಾನೆ.

ಪಿಂಗಲ ಬಣ್ಣದ ಕಣ್ಣುಳು, ವೇದವಿದ್ಯಾಪ್ರವೀಣ, ಗಂಭೀರ ಹಾಗೂ ಸ್ಪಷ್ಟವಾದ ಸ್ವರ ಪುಟಕ್ಕಿಟ್ಟ ಬಂಗಾರದಂತೆ ಹೊಳೆಯುವ ಮೈಬಣ್ಣ, ಉಬ್ಬಿದ ವಿಶಾಲವದ ಎದೆ, ಗಿಡ್ಡ ಶರೀರ, ಧಾರ್ಮಿಕ, ವಿನಯಶೀಲ, ನಿಪುಣ, ಸ್ಥಿರವಗಿ ನೆಟ್ಟ ದೃಷ್ಟಿಯುಳ್ಳವ, ಸಾಹಸಶೀಲ, ಪೀತವಸ್ತ್ರಧಾರಿ– ಇವು ಗುರುವಿನ ಸ್ವರೂಪ.

ಆಂಗೀರಸ ಹರ್ಷಿಯ ಮಗ. ಪತ್ನಿಯಾದ ತಾರೆಯಲ್ಲಿ ಇವನಿಗೆ ಸ್ವಿಷ್ಟಕೃತ್, ವಡವಾಗ್ನಿ ಮೊದಲಾದ ಆರುಜನ ಮಕ್ಕಳು. ಏಳನೆಯವಳು ಮಗಳು ಸ್ವಾಹಾ. ಕಚನೂ ಇವನ ಮಗ.

ಅಸುರನನ್ನು ಸೋಲಿಸಿ ದೇವತೆಗಳನ್ನು ರಕ್ಷಿಸುವುದರಲ್ಲಿ ಈತನದೇ ದೊಡ್ಡಪಾತ್ರ. ಶುಕ್ರಾಚಾರ್ಯರು ಧೂಮವ್ರತವೆಂಬ ತಪಸ್ಸಿನಲ್ಲಿದ್ದಾಗ ತಾನು ಶುಕ್ರನ ವೇಷದಿಂದ ರಾಕ್ಷಸರಾಜನಲ್ಲಿಗೆ ಹೋಗಿ ನಾಸ್ತಿಕ್ಯವನ್ನು ಬೋಧಿಸಿದ. ಇದರ ಫಲವಾಗಿ ರಾಕ್ಷಸಕುಲ ತಪಸ್ಸು ಮುಗಿಸಿದ ಶುಕ್ರನಿಂದ ಶಾಪಗ್ರಸ್ತವಾಯಿತು.

ದೈತ್ಯ ನಾಶಕ್ಕಾಗಿ ಸರಸ್ವತೀ ತೀರದಲ್ಲಿ ಬೃಹಸ್ಪತ್ಯಾಚಾರ್ಯರು ಮಹಾಯಾಗವೊಂದನ್ನು ಆಚರಿಸಿದ ಬಗ್ಗೆ ಮಹಾಭಾರತದಲ್ಲಿ ಉಲ್ಲೇಖವಿದೆ.ದೇವಗುರುವಾದ ಈತ ಸ್ವಾಭಿಮಾನಿ. ಅವಮಾನ ಅಗೌರವಗಳನ್ನು ಸಹಿಸಲಾರ. ಅದೊಂದು ದಿನ ದೇವಸಭೆಗೆ ಗುರುಗಳು ಆಗಮಿಸಿದಾಗ ದೇವೆಂದ್ರ ಎದ್ದು ನಿಲ್ಲಲಿಲ್ಲ. ಗುರುವಿಗೆ ಸಹನೆಯಾಗಲಿಲ್ಲ. ಯಾವ ಮಾತೂ ಆಡದೆ ಜಾಗ ಖಾಲಿ ಮಾಡಿದರು. ಬೃಹಸ್ಪತ್ಯಾಚಾರ್ಯರು ಎಲ್ಲಿ ಹೋದರೆಂದು ಯಾರಿಗೂ ತಿಳಿಯಲಿಲ್ಲ. ಪುರೋಹಿತರ ಮಂತ್ರಬಲವಿಲ್ಲದ ದೇವಗಣ ಸುಲಭವಾಗಿ ಅಸುರರಿಗೆ ಸೋತಿತು.

ಈ ಗ್ರಹವನ್ನು ಸ್ತುತಿಸುವ ಸ್ತೋತ್ರ ಹೀಗಿದೆ. ಈ ಶ್ಲೋಕವನ್ನು ಹತ್ತುಬಾರಿಯೋ ನೂರು ಬಾರಿಯೋ ಪಠಿಸುವುದರ ಮೂಲಕ ಗ್ರಹದೋಷವನ್ನು ಪರಿಹರಿಸಿಕೊಳ್ಳಬಹುದು.